# ದಾರಿದೀಪ

## ನಿವೃತ್ತ ಶಿಕ್ಷಕನ ಕೃಷಿ ಕಾಯಕ



**ಶ್ರೀಮತಿ ಗೀತಾ ಎಸ್. ತಾಮಗಾಳೆ, 9448552745**
**ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ,**

ಕೃಷಿಯಲ್ಲಿನ ಹಲವು ಸಮಸ್ಯೆಗಳಿಂದಾಗಿ ಬೇಸತ್ತು ಬೇರೆ ಕ್ಷೇತ್ರಗಳಲ್ಲಿ ಬದುಕು ಕಟ್ಟಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿರುವವರ ಮಧ್ಯ ಸರ್ಕಾರಿ ನೌಕರಿಯ ನಿವೃತ್ತಿಯ ನಂತರ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ 70ರ ಇಳಿ ವಯಸ್ಸಿನ ಶಿಕ್ಷಕ ಗೋಪಾಲಾಚಾರ್ ಬಡಿಗೇರ ತುಸು ಭಿನ್ನವಾಗಿದ್ದಾರೆ. ಮಿಶ್ರ ಬೆಳೆ ಪದ್ಧತಿ ಅನುಸರಿಸಿದರೆ ಉತ್ತಮ ಆದಾಯ ಪಡೆಯಬಹುದು ಎಂಬುದಕ್ಕೆ ಒಂದು ಉತ್ತಮ ನಿದರ್ಶನವಾಗಿದ್ದಾರೆ.

ಗೋಪಾಲಾಚಾರ್ ಬಡಿಗೇರ ಶಿಕ್ಷಣ ಇಲಾಖೆಯಲ್ಲಿದ್ದವರಾದರೂ ಕೃಷಿಯತ್ತ ಆಸಕ್ತಿಯನ್ನು ಹೊಂದಿದ್ದರು. ನಿವೃತ್ತಿಯ ನಂತರ ಈಗ ಪೂರ್ಣಪ್ರಮಾಣದ ಕೃಷಿಕರಾಗಿದ್ದಾರೆ. ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಗೆಜ್ಜೆಹಳ್ಳಿ ಗ್ರಾಮ ಗೋಪಾಲಾಚಾರ್ ಬಡಿಗೇರರವರ ಕಾರ್ಯಕ್ಷೇತ್ರ. ಸರ್ಕಾರಿ ನೌಕರಿ ಇದ್ದುದರಿಂದ ವರ್ಗವಾಗಿ ಹೋದೆಡೆಯಲ್ಲೆಲ್ಲ ಕೃಷಿ ಬದಲಾವಣೆಯನ್ನು ಗಮನಿಸುತ್ತಿದ್ದರು. ನಿವೃತ್ತಿಯ ನಂತರ ಗೆಜ್ಜೆಹಳ್ಳಿಯಲ್ಲಿ ಮೂರು ಎಕರೆ ಜಮೀನು ಖರೀದಿಸಿ ಅಡಿಕೆ, ಮಾವು, ಹಲಸು, ರಕ್ತಚಂದನ, ತೇಗ (ಸಾಗುವಾನಿ), ಗಾಳಿಗಿಡ, ಅಕೇಶಿಯಾ, ತೆಂಗಿನ ಜೊತೆಗೆ ಉಪಯುಕ್ತ ಔಷಧಿ ಸಸ್ಯಗಳನ್ನು ಬೆಳೆಸಿದ್ದಾರೆ. ದಾಲ್ಚಿನ್ನಿ ಗಿಡಗಳಿಂದ ಚಕ್ಕಿ, ಮೊಗ್ಗು, ಪಲಾವ್ ಎಲೆಗಳನ್ನು ಸಾಂಬಾರ್ ಪದಾರ್ಥಗಳಾಗಿ ಬೆಳೆಯುತ್ತಿದ್ದು, ಅಪಾರ ಆದಾಯ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮೂಲತಃ ಇದೇ ತಾಲೂಕಿನ ಹಿರೇಬಾಸೂರಿನವರಾಗಿದ್ದರೂ, 2005 ರಲ್ಲಿ ಗೆಜ್ಜೆಹಳ್ಳಿಯಲ್ಲಿ ಜಮೀನು ಖರೀದಿಸಿದ್ದರಿಂದ ಇಲ್ಲಿಯೇ ನೆಲೆಸಿದ್ದಾರೆ. ಜಮೀನು ಖರೀದಿಸಿದಾಗ ಖರೀದಿಸಿದ ಬಂಜರು ಭೂಮಿ ನೋಡಿ ಕೆಲವರು ಆಶ್ಚರ್ಯಪಟ್ಟಿದ್ದುಂಟು. ಆದರೆ ಸತತ 2 – 3 ವರ್ಷಗಳ ಕಾಲ ಶ್ರಮವಹಿಸಿ ಬಂಜರು ಭೂಮಿಯಂತಿದ್ದ ಜಮೀನಿನಲ್ಲಿ ಅರಿಶಿಣ, ಕಾಳುಮೆಣಸು, ಏಲಕ್ಕಿ, ಲವಂಗ, ದಾಲ್ಚಿನ್ನಿ, ಜಾಯಿಕಾಯಿ, ಹಲಸು, ಪೇರಲದ ಜೊತೆಗೆ ನಶಿಸುತ್ತಿರುವ ಔಷಧಿ ಸಸ್ಯಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಲಾವಂಚ, ಮಸ್ಕತ್, ಸುರಗಿ, ರಾಮಪತ್ರಿ, ಕೆಂಪು ದೇವದಾರಿ, ಸರ್ಪಗಂಧಿ, ಅಗ್ನಿಮಂತಿ, ಶಿಲೇಶಿಯಾ, ಏಕನಾಯಕ, ನಾಗಸಂಪಿಗೆ, ಆಪೋಡೋಟೀಸ, ಕೆಂಪು ನೇರಳೆ, ಅಬುಲಾಂಗ, ನವಣೆ, ವಾಟೆಹುಳಿ, ಜಾವುಣಿಗ, ಸಾಲುದೂಪ, ಮಾಳಂಜಿ ಮಾವು, ಕರಿದೂಪ, ಗೊರೆಗದ್ದೆ ಬಕ್ಕೇಹಲಸು, ಮುರುಗಲ, ಜೊತೆಗೆ ವಾಣಿಜ್ಯ ಬೆಳೆಗಳಾದ ರಕ್ತ ಚಂದನ, ಏಲಕ್ಕಿ, ಗೋಡಂಬಿ, ಹಿಪ್ಪಲಿ ಮೆಣಸು, ಜಾಯಿಕಾಯಿ ಹಾಗೂ ಹೂವಿನ ಗಿಡಗಳಾದ ಪಾರಿಜಾತ, ಸಂಪಿಗೆ, ನಾಗ ಸಂಪಿಗೆ, ಬಣ್ಣ – ಬಣ್ಣದ ದಾಸವಾಳಗಳು, ಮಲ್ಲಿಗೆ, ಮಂದಾರ ಪುಷ್ಪ ಹೀಗೆ ಅನೇಕ ಸಸಿಗಳನ್ನು ಬೆಳೆಸಿದ್ದಾರೆ.

ಜಮೀನಿನ ಸುತ್ತ 500 ಸಾಗುವಾನಿ, 100 ಗಾಳಿ, 150 ತೆಂಗಿನ ಗಿಡ, 126 ದಾಲ್ಚಿನ್ನಿಗಿಡ, 120 ಮಾವಿನ ಗಿಡ, 64 ಕರಿಬೇವಿನ ಗಿಡಗಳನ್ನು ಬೆಳೆದಿದ್ದಾರೆ. ಆರು ವರ್ಷಗಳ ಹಿಂದೆ ನಾಟಿ ಮಾಡಿದ ದಾಲ್ಚಿನ್ನಿ ಗಿಡಗಳು ಉತ್ತಮ ಆದಾಯ ನೀಡುತ್ತಿವೆ. ನಾಟಿ ಮಾಡಿದ 4ನೇ ವರ್ಷದಿಂದ ದಾಲ್ಚಿನ್ನಿ ಮೊಗ್ಗು, ಬಲಿತ ಎಲೆ, ಚಕ್ಕೆ ಮಾರಾಟ ಮಾಡುತ್ತಿದ್ದು ಇವರ ಪ್ರಕಾರ ದಾಲ್ಚಿನ್ನಿ ಕೃಷಿ ಒಂದು ಲಾಭದಾಯಕ ಕೃಷಿಯಾಗಿದೆ. ಪ್ರಾರಂಭಿಕ ಹಂತದಲ್ಲಿ ಒಂದು ಗಿಡದಿಂದ ಪಡೆಯಲಾಗುತ್ತಿದ್ದ 2 ರಿಂದ 3 ಕೆ ಜಿ ದಾಲ್ಚಿನ್ನಿಯ ಮಾರಾಟದಿಂದಲೂ ಇಂದಿನವರೆಗೂ ಶಿರಸಿಯ ಕದಂಬ ಸಂಸ್ಥೆ ಹಾಗೂ ಸ್ಥಳೀಯ ವ್ಯಾಪಾರಸ್ಥರೊಂದಿಗೆ ಒಪ್ಪಂದ. ಕಳೆದ ವರ್ಷ ಸುಮಾರು 40 ಸಾವಿರ ರೂಪಾಯಿಗಳ ಆದಾಯ ಪಡೆದಿದ್ದು ಈ ಸಾರಿ 80 ಸಾವಿರ ಆದಾಯದ ಆಶಯವಿದೆ. ರೈತರು ದಾಲ್ಚಿನ್ನಿ ಕೃಷಿ ಮಾಡಿದರೆ ಉತ್ತಮ ಲಾಭ ಪಡೆಯಬಹುದು ಎನ್ನುವ ಇವರು ಈ ಬಗ್ಗೆ ರೈತರಿಗೆ ಮಾಹಿತಿ ನೀಡಲು ತಾವು ಸಿದ್ದ ಎನ್ನುತಾರೆ. ಇವರು ಒಂದು ಕೆಜಿ ದಾಲ್ಚಿನ್ನಿ ಮೊಗ್ಗಿಗೆ 800 ರೂ. ಎಲೆಗೆ 60 ರೂ. ಚಕ್ಕೆಗೆ 600 ರೂ. ಬೆಲೆಯಿದೆ. ಕರಿಬೇವನ್ನು ಕಿಲೋಗೆ 30 ರೂ.ನಂತೆ ಮಾರುತ್ತಿದ್ದು ಅರ್ಧ ಎಕರೆ



ಶುಂಠಿಯಿಂದ 1 ಲಕ್ಷ ಲಾಭ ಪಡೆದಿದ್ದಾರೆ. ಮಾವಿನ ಬೆಳೆಯಿಂದ 40 ಸಾವಿರ, ಆರು ವರ್ಷದ ಹಿಂದೆ ನೆಟ್ಟ 160 ಗಾಳಿ ಮರದ ಮಾರಾಟದಿಂದ 60 ಸಾವಿರ ಆದಾಯ ಪಡೆದಿದ್ದಾರೆ. ಜಮೀನಿನ ಸುತ್ತ ಇರುವ 10 ವರ್ಷದ ಸಾಗವಾನಿ ಗಿಡಗಳು ಇನ್ನು ಐದಾರು ವರ್ಷದಲ್ಲಿ ಕಟಾವಿಗೆ ಬರಲಿವೆ.

ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಕೃಷಿಯಲ್ಲಿ ಹೊಸತನ್ನು ಸಾಧಿಸಲು ಮಂಡ್ಯದಿಂದ ತಂದು ನೆಟ್ಟ ಹೊಸ ತಳಿಯ ತೆಂಗಿನ ಸಸಿಗಳು ಫಸಲು ನೀಡುತ್ತಿವೆ. ಇದರೊಂದಿಗೆ ಕರಿಬೇವು, ನಿಂಬೆಹಣ್ಣಿನ ಗಿಡಗಳೂ ಸಮೃದ್ಧವಾಗಿ ಬೆಳೆದಿವೆ. ಇದೆಲ್ಲದರ ನಡುವೆ ಅರ್ಧ ಎಕರೆಯಲ್ಲಿ ಶುಂಠಿ ಬೆಳೆಯಲಾಗಿದ್ದು ಲಾಭ ತರುವ ವಾಣಿಜ್ಯ ಬೆಳೆಯಾಗಿ ಕೈ ಸೇರುತ್ತಿದೆ. ಮೂರು ಎಕರೆ ಕೃಷಿ ಭೂಮಿಗೆ ಕೊಳವೆ ಬಾವಿ ಕೊರೆಸಲಾಗಿದ್ದು, ಒಂದೂವರೆ ಇಂಚು ನೀರು ದೊರೆಯುತ್ತಿದೆ. ಅಲ್ಪ ನೀರನ್ನೇ ಬಳಸಿಕೊಂಡಿರುವ ಬಡಿಗೇರ, ಎಲ್ಲ ಗಿಡಗಳಿಗೆ ಹಂತ – ಹಂತವಾಗಿ ಸರದಿಯಂತೆ ಹನಿ ನೀರಾವರಿ ಮೂಲಕ ನೀರುಣಿಸುತ್ತಿದ್ದಾರೆ. ಶುಂಠಿಗೆ ತುಂತುರು ನೀರಾವರಿ ಪದ್ಧತಿ ಅಳವಡಿಸಿದ್ದು ಹಸಿರು ಕಳೆ ಕಟ್ಟಿದಂತಿದೆ. ಕೃಷಿ ಪ್ರಾರಂಭಿಸಿದ ಆರಂಭದ ದಿನಗಳಲ್ಲಿ ಗಿಡಗಳಿಗೆ ನೀರುಣಿಸಲು ಅಪ್ಪಟ ದೇಶಿ ಶೈಲಿಯಲ್ಲಿ ಹನಿ ನೀರಾವರಿ ಪ್ರಾರಂಭಿಸಿದರು. ಯಾವುದೇ ಬ್ಯಾಂಕ್ ಸಾಲ, ಇಲಾಖೆ ಸೌಲಭ್ಯದ ಮೊರೆ ಹೋಗದೆ ಅಲ್ಪ ಹಣದಲ್ಲಿ ಮಣ್ಣಿನ ಕೊಡಗಳನ್ನು ಕೊಂಡು ತಂದು ಅವುಗಳಿಗೆ ಸಣ್ಣ ರಂಧ್ರ ಕೊರೆದು ಗಿಡಗಳ ಬುಡದಲ್ಲಿಟ್ಟು ಪ್ರತಿದಿನ ಮುಂಜಾನೆ, ಸಂಜೆ ಕೊಡಗಳಿಗೆ ನೀರು ತುಂಬಿಸುತ್ತಿದ್ದರು. ನೀರು ರಂಧ್ರಗಳ ಮುಖಾಂತರ ಹನಿ ಹನಿಯಾಗಿ ತೊಟ್ಟಿಕ್ಕುವಂತೆ ಮಾಡಿದ್ದರಿಂದ ಸಸ್ಯಗಳ ಬುಡದಲ್ಲಿ ಸದಾ ತೇವಾಂಶ ಇದ್ದು ಗಿಡಗಳು ಸೊಂಪಾಗಿ ಬೆಳೆಯಲು ಅನುಕೂಲವಾಯಿತು. ಬಡಿಗೇರ ದಂಪತಿಗಳು ಮೂರು ಎಕರೆ ಕೃಷಿ ಭೂಮಿಯನ್ನು ಹೂವು – ಹಣ್ಣುಗಳಿಂದ ನಂದನ ವನವನ್ನಾಗಿ ಪರಿವರ್ತಿಸಿದ್ದಾರೆ. ಕೃಷಿ ಪ್ರಾರಂಭಿಸಿದ ಆರಂಭದಲ್ಲಿ ಆದಾಯ ಕಡಿಮೆ ಎಂಬ ದೂರದೃಷ್ಟಿಯಿಂದ ಮನೆಯಲ್ಲಿ ಸಣ್ಣ ಹಿಟ್ಟಿನ ಗಿರಣಿ ಸ್ಥಾಪಿಸಿದ್ದು, ಗ್ರಾಮದವರೆಲ್ಲರಿಗೂ ವಿರಾಮದ ವೇಳೆಯಲ್ಲಿ ಅಕ್ಕಿ, ಜೋಳ, ಗೋದಿ, ಮುಂತಾದವುಗಳನ್ನು ಹಿಟ್ಟು ಮಾಡಿಕೊಡುತ್ತಾರೆ. ಎಲ್ಲ ಕೆಲಸ – ಕಾರ್ಯಗಳಲ್ಲಿ ಪತ್ನಿ ಚಂದ್ರಕಾಂತಮ್ಮ ಕೈಜೋಡಿಸಿರುವುದು ವಿಶೇಷ. ಗೋಪಾಲಾಚಾರ್ ಬಡಿಗೇರ ಅವರ ಕೃಷಿ ಸಾಧನೆ ಗಮನಿಸಿ, ಕೃಷಿ ಇಲಾಖೆಯು ರೈತ ದಿನಾಚರಣೆಯಂದು ಸನ್ಮಾನಿಸಿ ಗೌರವಿಸಿದೆ. ಆಸಕ್ತ ರೈತರಿಗೆ ದಾಳ್ಚಿನ್ನಿ ಕೃಷಿ ಕುರಿತು ಮಾಹಿತಿ ನೀಡಲು ಸಿದ್ಧವಿರುವ ಇವರನ್ನು ಸಂಪರ್ಕಿಸಲು 9481683050 / 7026057144 ದೂರವಾಣಿಗೆ ಕರೆ ಮಾಡಬಹುದು. ಈ ವರ್ಷದ ಕೃಷಿಮೇಳದಲ್ಲಿ ತಮ್ಮ ಕೃಷಿ ಆವಿಷ್ಕಾರಗಳನ್ನು ಸಹ ಹಂಚಿಕೊಂಡಿದ್ದಾರೆ. ವೃತ್ತಿಯಿಂದ ನಿವೃತ್ತಿ ಹೊಂದಿದ್ದರೂ ಕೃಷಿಯಿಂದ ನಿವೃತ್ತಿ ಹೊಂದದ ಇವರು ಅನುಕರಣೀಯರು.

## ಪುಟ. 13 ರಿಂದ........

**ಕಾಳುಮೆಣಸಿನ ಕೃಷಿ**

ಸಮುದ್ರ ಮಟ್ಟದಿಂದ 300–1800 ಅಡಿಗಳ ಎತ್ತರದವರೆಗೆ ದೇಶಾದ್ಯಂತ ವಿಸ್ತರಿಸಲ್ಪಟ್ಟಿರುವ ಕಾಳುಮೆಣಸಿನ ಕೃಷಿ ಉತ್ಕೃಷ್ಟಮಟ್ಟದ್ದಾಗಿದೆ. ಇಳಿಜಾರು ಮತ್ತು ಮಟ್ಟಸ ಪ್ರದೇಶ ಹೀಗೆ ವಿವಿಧ ಬಗೆಯ ಭೂಮಿಗಳಲ್ಲಿ ಅವರು ಕಾಳುಮೆಣಸು ಬೆಳೆದು ಯಶ ಕಂಡಿದ್ದಾರೆ. 3 X 3 ಮೀಟರು ಅಂತರದಲ್ಲಿ ಚೆನ್ನಾಗಿ ಉತ್ತಿದ ರಂಧ್ರಯುಕ್ತ ಮಣ್ಣಿನಲ್ಲಿ ಕಾಳುಮೆಣಸಿನ ಬಳ್ಳಿಗಳನ್ನು ನೆಡಲಾಗಿದೆ. ಯಾವುದೇ ಕಾಡುಮರಗಳನ್ನು ಆಧಾರಕ್ಕೆ ಬೆಳೆಸದೇ, ಜೀವಂತ ಹಾಗೂ ನಿರ್ಜೀವ ಆಧಾರ ಸ್ಥಂಭಗಳ ಸಂಯೋಜನೆಯೊಂದಿಗೆ ಬಳ್ಳಿಗಳ ಹಬ್ಬುವಿಕೆ ಇಲ್ಲಿ ಕಾಣಬಹುದಾಗಿದೆ. ಕೆಲವೆಡೆ ನಿರ್ಜೀವ ಮರದ ಕಂಬಗಳು, ಟೊಳ್ಳಾದ ಇಟ್ಟಿಗೆಯ ಸ್ಥಂಭಗಳನ್ನು ಕೂಡ ಬಳ್ಳಿ ಹಬ್ಬಿಸಲು ಬಳಸಲಾಗಿರುವುದು ವಿಶೇಷ. ನಮ್ಮ ಕರಿಮುಂಡಾ ತಳಿಯನ್ನು ಹೋಲುವಂತಹ ವಿವಿಧ ತಳಿಗಳನ್ನು ಇಲ್ಲಿನ ರೈತರು ಬೆಳೆಯುತ್ತಿದ್ದು, ಪ್ರತಿ ಬಳ್ಳಿಗೂ ಜೈವಿಕ ಗೊಬ್ಬರ ಮತ್ತು 10–15 ದಿನಗಳಿಗೊಮ್ಮೆ ನೀರು ಹಾಯಿಸುವಿಕೆ ನಡೆಯುತ್ತದೆ. ರಾಸಾಯನಿಕ ಗೊಬ್ಬರಗಳನ್ನು ಮೊದಲ ಮಳೆಯ ಸಿಂಚನದ ನಂತರ ಒದಗಿಸುತ್ತಾರೆ. ಅವಶ್ಯಕತೆಗೆ ತಕ್ಕಂತೆ ಯುಕ್ತವಾದ ಕ್ರಿಮಿನಾಶಕಗಳ ಸಿಂಪರಣೆಯೂ ಇದೆ. ಕೆಲವೆಡೆ ಕೃಷಿಭೂಮಿಗಳಲ್ಲಿ ಕಾಳುಮೆಣಸಿನ ಬಳ್ಳಿಗಳ ಕಾಂಡಕ್ಕೆ ಕಾಪರ್ ಆಕ್ಸಿ ಕ್ಲೋರೈಡನ್ನು ಸಿಂಪರಿಸಿರುವುದನ್ನು ಗಮನಿಸಿದೆವು. ಆದರೆ ಎಲ್ಲಿಯೂ ಬೋರ್ಡೋ ಸಿಂಪರಣಾ ಪದ್ಧತಿಯು ಕಂಡು ಬರಲಿಲ್ಲ. ಬದಲಾಗಿ ರೋಗಗ್ರಸ್ತ ಬಳ್ಳಿಗಳನ್ನು ಬುಡಸಮೇತ ಕಿತ್ತು ಆ ಸ್ಥಳದ ಮಣ್ಣನ್ನು ಪುನಶ್ಚೇತನಗೊಳಿಸಿ ಹೊಸ ಬಳ್ಳಿಗಳನ್ನು ಹತ್ತಿರದಲ್ಲೇ ನೆಡುವ ಪದ್ಧತಿಯನ್ನೂ ಗಮನಿಸಿದೆವು. ಇಳುವರಿ ಕೂಡ ಗಣನೀಯವಾಗಿದ್ದು ನಮ್ಮಲ್ಲಿನ ಇಳುವರಿಗಿಂತ ಅಲ್ಲಿನ ಸರಾಸರಿ ಇಳುವರಿ ಅನುಪಾತ ಹೆಚ್ಚಾಗಿಯೇ ಇದೆ.

**ಬೆಳೆಗಾರರ ಜೀವನ ಕ್ರಮ**

ಅವರು ಅತ್ಯಂತ ಸರಳಜೀವನ ನಡೆಸುತ್ತಾರೆ. ನಮ್ಮ ಮಲೆನಾಡು ಪ್ರದೇಶದಲ್ಲಿರುವಂತೆ ದೊಡ್ಡ ದೊಡ್ಡ ಬಂಗಲೆಮನೆಗಳು ಅಲ್ಲಿ ಇಲ್ಲವೇ ಇಲ್ಲ. ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟರಮಟ್ಟಿನ ಪುಟ್ಟ ಪುಟ್ಟ ಮನೆಗಳಲ್ಲಿ ಅಲ್ಲಿನ ರೈತ ಬೆಳೆಗಾರರು ವಾಸವಿರುವುದನ್ನು ನಾನು ಗಮನಿಸಿದ್ದೇನೆ. ಕಾರುಗಳನ್ನು ಇಟ್ಟವರು ತುಂಬಾ ಕಡಿಮೆ. ಬಹುತೇಕ ಎಲ್ಲರೂ ದ್ವಿಚಕ್ರವಾಹನಗಳಲ್ಲಿ ಓಡಾಡುತ್ತಾರೆ. ಒಂದು ಮೋಟಾರ್ ಸೈಕಲಿನಲ್ಲಿ ಮೂರು ಜನ ಪ್ರಯಾಣ ಮಾಡುತ್ತಾರೆ. ಅಕ್ಕಪಕ್ಕದ ಹಿಡುವಳಿಯವರು ಖರ್ಚು ಕಡಿಮೆ ಮಾಡಲು ಒಂದೇ ದ್ವಿಚಕ್ರ ವಾಹನದಲ್ಲಿ ಜೊತೆಗೆ ಪೇಟೆಗೆ ಹೋಗಿ ಕೆಲಸ ಮುಗಿಸಿಕೊಂಡು ಬರುತ್ತಾರೆ. ಅಲ್ಲಿ ಕಾಫೀ, ಕಾಳುಮೆಣಸು ಮತ್ತು ಇನ್ನಿತರ ಉತ್ಪನ್ನಗಳ ಕೃಷಿ ದೊಡ್ಡಮಟ್ಟದಲ್ಲಿ ಪ್ರಗತಿಯನ್ನು ಕಾಣುತ್ತಿದ್ದು, ನಮ್ಮ ದೇಶಕ್ಕಿಂತ ಕಡಿಮೆ ಖರ್ಚಿನಲ್ಲಿ ತೋಟಗಳ ನಿರ್ವಹಣೆ ಆಗುತ್ತಿರುವುದರಿಂದ, ಒಟ್ಟಾರೆಯಾಗಿ ಎಕರೆವಾರು ಲೆಕ್ಕದಲ್ಲಿ ತಗಲುವ ನಿರ್ವಹಣಾ ವೆಚ್ಚ ಕಡಿಮೆ ಇದೆ. ಹಾಗಾಗಿ ಹೆಚ್ಚಿನ ಉತ್ಪಾದಕತೆ ಸಾಧಿಸುವುದು ಸಾಧ್ಯವಾಗಿದ್ದು, ಬೆಲೆ ಏರಿಳಿತ ಸಂಭವಿಸಿದರೂ ಅದನ್ನು ತಡೆದುಕೊಳ್ಳುವ ಕ್ಷಮತೆ ಅಲ್ಲಿನ ಬೆಳೆಗಾರರಿಗೆ ಇದೆ.

ಅಚಲವಾದ ರಾಷ್ಟ್ರಭಕ್ತಿ, ನಿರಂತರವಾದ ಶ್ರಮಜೀವನ, ತುಂಬು ಮನಸ್ಸಿನ ಕಾರ್ಯ ಶ್ರದ್ಧೆ, ಸರಲ ಬದುಕು, ಆಡಂಬರದ ಮೋಜಿನ ಜೀವನಕ್ಕೆ ದೂರದಿಂದಲೇ ವಿದಾಯ, ಮಿತವ್ಯಯದ ಪಾಲನೆ ಹಾಗೂ ವಿಯೆಟ್ನಾಂ ಸರಕಾರದಿಂದ ಸಹಕಾರ ಮತ್ತು ಪ್ರೋತ್ಸಾಹ ಮತ್ತು ವಿಯೆಟ್ನಾಂ ದೇಶದ ಪ್ರಕೃತಿ ಮತ್ತು ಹವಾಮಾನದ ಕೊಡುಗೆಯಿಂದ ಕಿರಿದಾದ ಈ ರಾಷ್ಟ್ರ ವಿಶ್ವದಲ್ಲಿಯೇ ಕಾಫಿ ಬೆಳೆಯುವ ಎರಡನೇ ದೊಡ್ಡ ದೇಶ, ಪ್ರಪಂಚದಲ್ಲಿಯೇ ಮೆಣಸಿನ ಬೆಳೆಯ ಉತ್ಪನ್ನದಲ್ಲಿ ಮೊದಲನೆಯ ದೇಶವಾಗಿ ಹೊರಹೊಮ್ಮುವಲ್ಲಿ ಸಾಧ್ಯವಾಗಿದೆ.